O.S.No.32/2018 PW-1

ದಿನಾಂಕ :25.11.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

**ಮುಂದೂವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎಸ.ಎಸ.ಪಿ. ರವರಿಂದ ಃ-**

ಹಣಮಂತ ತಂದೆ ಶರಣಪ್ಪ ರವರ ಹೆಂಡತಿ ಹೆಸರು ನನಗೆ ಗೊತ್ತಿಲ್ಲ. ಹಣಮಂತ ರವರಿಗೆ ಶಿವಪ್ಪ ಎಂಬ ಒಬ್ಬನೇ ಮಗ ಇರುತ್ತಾನೆ. ಹಣಮಂತ ಮಗ ಶಿವಪ್ಪ ಎಂಬುವುದಕ್ಕೆ ಯಾವುದೇ ದಾಖಲೆ ಹಾಕಿಲ್ಲ . ಶಿವಪ್ಪನಿಗೆ ಹುಚ್ಚಪ್ಪ ಹಾಗೂ ಚಂದವ್ವ ಇಬ್ಬರೂ ಮಕ್ಕಳು ಇರುತ್ತಾರೆ .ನಾನು ಹಾಜರುಪಡಿಸಿರುವ ವಂಶಾವಳಿಯಲ್ಲಿ ಚಂದವ್ವಳನ್ನು ನಾನು ತೋರಿಸಿಲ್ಲ. ನಾನು ಹಾಜರುಪಡಿಸಿರುವ ವಂಶಾವಳಿಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಶಿವಪ್ಪ ರವರು ನಾನು ಚಿಕ್ಕವನಿದ್ದಾಗ ಮರಣ ಹೊಂದಿರುತ್ತಾರೆ. ದಾವಾ ಆಸ್ತಿಯಲ್ಲಿ ಮನೆಗಳು, ರಸ್ತೆ, ಭಾವಿ ಹಾಗೂ ಅಂಗನವಾಡಿ ಇವೆ ಎಂದರೆ ಸರಿ. ಸಾಕ್ಷಿಯು ಮುಂದೂವರೆದು ಸದರಿ ಆಸ್ತಿ ನಮ್ಮ ಆಸ್ತಿ ಎಂದು ನುಡಿಯುತ್ತಾರೆ. ಸದರಿ ಮನೆಗಳು, ರಸ್ತೆ, ಭಾವಿ ನನ್ನ ತಂದೆಯವರ ಕಾಲದಿಂದ ಇವೆ.

ಈ ಸಮಯದಲ್ಲಿ ಮುಂದುಾವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ ಸಮಯ ನೀಡಿ ಮುಂದುಾಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ